ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ 57)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.681/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶಕುಂತಲಾ** | | |
| **ಗಂಡ ಹೆಸರು** | **ಶಾಂತಪ್ಪ** | **ಪಿಡಬ್ಲ್ಯೂ:** | **3** |
| **ವಯಸ್ಸು** | **55 ವರ್ಷ** | **ಸಿಡಬ್ಲ್ಯೂ:** | **5** |
| **ಉದ್ಯೋಗ:** | **ಕಿರಾಣಿ ಅಂಗಡಿ** | | |
| **ವಾಸ ಸ್ಥಳ:** | **ಮುಳ್ಳೂರು.** | | |

**ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ನನಗೆ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ನನಗೆ ಯಾವುದೇ ಅಪಘಾತ ಆಗಿಲ್ಲ. ನಾನು ಚಿಕಿತ್ಸೆ ಪಡೆದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ.ಸ.ಅ. ರವರಿಂದ::**

ದಿನಾಂಕ:13.11.2024 ರಂದು ನಾನು & ಚಾಸಾ.4 ರವರು ನನ್ನ ಸಂಬಂಧಿಕರ ಮನೆಯ ಗೃಹಪ್ರವೇಶಕ್ಕೆ ಹೋಗಿ ರಾ.8-30 ಕ್ಕೆ ಮರಳಿ ಬರುತ್ತಿದ್ದೇವೆ ಎಂದು ಚಾಸಾ-1 ರವರಿಗೆ ತಿಳಿಸಿದ್ದು, ಮನೆಗೆ ಬರಬೇಕೆಂದು ಮ-ಸಿ ಮುಖ್ಯರಸ್ತೆಯ ಎಡಬಾಜುವಿನಲ್ಲಿ ಶರಣಪ್ಪರವರ ಮನೆಯ ಮುಂದೆ ನಡೆದುಕೊಂಡು ಬರುತ್ತಿದ್ದಾಗ ಮೋ.ಸೈ. ನ್ನು ಅದರ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿದ್ದ, ಅದರಿಂದ ಚಾಸಾ-4 ರವರಿಗೆ ಒಳಪೆಟ್ಟಾಗಿತ್ತು ಎಂದರೆ ಸರಿಯಲ್ಲ. ನೀನು ಬೇಗ ಬಾ ಎಂದು ಚಾಸಾ-1 ರವರಿಗೆ ತಿಳಿಸಿದ್ದೆವು ಎಂದರೆ ಸರಿಯಲ್ಲ.

ಸದರಿ ವಾಹನದ ಸಂ. ಎ ಪಿ 02/ಎಡಿ-9531 ಆಗಿತ್ತು ಎಂದರೆ ಸರಿಯಲ್ಲ. ಆತನನ್ನು ವಿಚಾರಿಸಿದಾಗ ಆತನ ಹೆಸರು ಪವನ್ ಕುಮಾರ್ ಎಂದು ತಿಳಿದಿತ್ತು, ನಂತರ ಚಾಸಾ-1 & 4 ಆರೋಪಿಯನ್ನು ಶಾಂತಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನಿಮಗೆ ಕೇವಲ ಕಾಲು ಬಾವು ಬಂದಿತ್ತು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.